ಇಲ್ಲ. ಎಲ್ಲ ಮಕ್ಕಳನ್ನು ಆತ ತುಂಬ ಸ್ನೇಹದಿಂದಲೇ ಕಾಣುತ್ತಿದ್ದ. ಆದರೆ ತನ್ನ ಆ ಪುಟ್ಟ ಸ್ನೇಹಿತನಿಗಾಗಿ ಆತ ಸದಾ ಹಂಬಲಿಸುತ್ತಿದ್ದ. ಯಾವಾಗಲೂ ಆತನ ಕುರಿತೇ ಮಾತಾಡುತ್ತಿದ್ದ. "ಆತನನ್ನು ಕಾಣಲು ನಾನು ಅದೆಷ್ಟು ಕಾತುರನಾಗಿರುವೆ, ಗೊತ್ತೆ'' ಎನ್ನುತ್ತಿದ್ದ.



ವರುಷಗಳು ಗತಿಸಿದವು. ಆ ರಾಕ್ಷಸ ಮುದುಕನಾದ ಹಾಗೂ ತುಂಬ ಕೃಶನಾದ. ಈಗ ಆತ ಮಕ್ಕಳೊಡನೆ ಆಟವಾಡುವಷ್ಟು ಸಶಕ್ತನಾಗಿರಲಿಲ್ಲ. ಆದ್ದರಿಂದ ಒಂದು ದೊಡ್ಡ ಆರಾಮ ಕುರ್ಚಿಯಲ್ಲಿ ಕುಳಿತು ಮಕ್ಕಳು ಆಟವಾಡುವುದನ್ನು ನೋಡುತ್ತಿದ್ದ ಹಾಗೂ ತನ್ನ ಹೂದೋಟವನ್ನು ಆದರಿಸುತ್ತಿದ್ದ.

"ನನ್ನ ಹೂದೋಟದಲ್ಲಿ ಎಷ್ಟೋ ಬಗೆಯ ಸುಂದರ ಹೂಗಳಿವೆ, ಆದರೆ ಮಕ್ಕಳು ಎಲ್ಲ ಹೂಗಳಿಗಿಂತಲೂ ಸುಂದರ ಹೂಗಳು" ಎಂದು ಉದ್ಗರಿಸುತ್ತಿದ್ದ.

ಒಂದು ಚಳಿಗಾಲದ ಮುಂಜಾನೆ ಬಟ್ಟೆ ಧರಿಸಿಕೊಳ್ಳುತ್ತ ಆತ ತನ್ನ ಕೋಣೆಯ ಕಿಟಕಿಯಿಂದ ಹೊರಗೆ ನೋಡಿದ. ಈಗ ಆತ ಚಳಿಗಾಲವನ್ನು ಕೂಡ ದ್ವೇಷಿಸುತ್ತಿರಲಿಲ್ಲ. ವಸಂತ ಋತುವಿನ ಮಲಗಿದ ಸ್ಥಿತಿಯೇ ಚಳಿಗಾಲ ಎಂಬ ಅರಿವು ಈಗ ಅವನಲ್ಲಿ ಅಂಕುರಿಸಿತ್ತು. ಅಂದರೆ ಹೂಗಳು ಇದೀಗ ವಿಶ್ರಾಂತಿ ಪಡೆಯುತ್ತಿವೆ ಎಂದೇ ಭಾವಿಸುತ್ತಿದ್ದ.

ಇದ್ದಕ್ಕಿದ್ದಂತೆ ಆಶ್ಚರ್ಯಚಕಿತನಾಗಿ ತನ್ನ ಕಣ್ಣುಗಳನ್ನು ಉಜ್ಜಿಕೊಂಡು ನೋಡಿಯೇ ನೋಡಿದ. ನಿಜಕ್ಕೂ ಅದೊಂದು ಅದ್ಭುತ ದೃಶ್ಯವಾಗಿತ್ತು. ಹೂದೋಟದ ಕಟ್ಟಕಡೆಯ ಮೂಲೆಯಲ್ಲಿ ಒಂದು ಮರ ಬಿಳಿಬಣ್ಣದ ಹೂಗಳಿಂದ ಆಚ್ಛಾದಿತವಾಗಿತ್ತು. ಅದರ ಟೊಂಗೆಗಳು ಬಂಗಾರ ವರ್ಣವಾಗಿದ್ದವು. ಬೆಳ್ಳಿವರ್ಣದ ಹಣ್ಣುಗಳು ಅದರ ಟೊಂಗೆಗಳಿಗೆ ಜೋತು ಬಿದ್ದಿದ್ದವು. ಅಲ್ಲದೆ ಆ ಮರದ ಕೆಳಗೆ ತಾನು ಅತ್ಯಂತ ಪ್ರೀತಿಸುವ ಆ ಪುಟ್ಟ ಬಾಲಕ ನಿಂತಿದ್ದ.